ಪುಸ್ತಕ ಪರಿಚಯ

# ಜೀವಿ ವಚನ ಶತಕ

(ಸಂಪುಟ ಒಂದು) ೧–೧೦೦

**ಲೇಖಕರು** : ಡಾ. 'ಜೀವಿ' ಕುಲಕರ್ಣಿ ; **ಪ್ರಕಾಶಕರು** : ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ – ೫೮೦ ೦೩೨

**ಬೆಲೆ** : ೭೫/– ರೂಪಾಯಿಗಳು ; **ಪುಟಗಳು** : ೧೪೪

ಡಾ. ಜಿ. ವಿ ಕುಲಕರ್ಣಿಯವರ ಇತ್ತೀಚಿನ ಕೃತಿ, 'ಹೊಸ ಪ್ರಯೋಗ' ಈ ಪುಸ್ತಕ. 'ಜೀವಿ' ಎಂಬ ಕಾವ್ಯನಾಮದಲ್ಲಿ ಹಲವಾರು ಮೌಲಿಕ ಸಾಹಿತ್ಯಕೃತಿಗಳನ್ನು ನೀಡಿರುವ ಡಾ. ಕುಲಕರ್ಣಿಯವರು ಮುಂಬಯಿಯ ಕಾಲೇಜುಗಳಲ್ಲಿ ಕನ್ನಡ, ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು. ಈಗ ನಿವೃತ್ತರಾಗಿದ್ದಾರೆ. ಆರೋಗ್ಯ, ಯೋಗಾಸನ, ಪ್ರಾಣಾಯಾಮ, ಪ್ರಕೃತಿಚಿಕಿತ್ಸೆ ಇವರ ಇತರ ಆಸಕ್ತಿಗಳು. ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳನ್ನು ಕರಗತ ಮಾಡಿಕೊಂಡಿರುವ ಇವರು ಕನ್ನಡದ ಪ್ರತಿಭಾವಂತ ಲೇಖಕರು.

ತಮ್ಮ ಜೀವನಾನುಭವ, ಆಲೋಚನೆ ಹಾಗೂ ವಿವಿಧ ಪುಷ್ಪಗಳಿಂದ ಸಂಚಯಿಸಿದ ಮಧು – ಈ ಎಲ್ಲವೂ ಈ ಸಂಕಲನದಲ್ಲಿ ನಾಲ್ಕು–ಐದು ಇಲ್ಲವೆ ಆರು ಸಾಲುಗಳಲ್ಲಿ ಪದ್ಯಗಂಧಿ ಗದ್ಯವಾಗಿ, ಇಲ್ಲವೇ ಗದ್ಯಲಯದ ಪದ್ಯವಾಗಿ ರೂಪು ತಾಳಿವೆ. ವೈವಿಧ್ಯತೆ ಮತ್ತು ಅಭಿವ್ಯಕ್ತಿ ವೈಶಿಷ್ಟ್ಯ ಈ ಕೃತಿಯ ವಿಶೇಷ ಗುಣಗಳಾಗಿವೆ. ೧೨ನೇ ಶತಮಾನದ ಶರಣರ ವಚನಗಳ ಬಗೆಗೆ ಇರುವ ಮೆಚ್ಚುಗೆ ಮತ್ತು ಅವುಗಳಿಂದ ಉಂಟಾದ ಸ್ಫೂರ್ತಿ – ಇವೇ ಈ ರಚನೆಗಳನ್ನು 'ವಚನ'ಗಳೆಂದು ಕರೆಯಲು ಕಾರಣವಾಗಿದೆ.

ಆದರೆ ಇವು ನಿಜವಾದ ಅರ್ಥದಲ್ಲಿ 'ವಚನ'ಗಳಾಗಿಲ್ಲ. ಶರಣರ ವಚನದ ಆಶಯವೇ ಬೇರೆ, ರೀತಿಯೇ ಬೇರೆ. ಶರಣರು ಸಾಹಿತ್ಯೋದ್ದೇಶದಿಂದ ಈ ಪ್ರಕಾರವನ್ನು ಸೃಷ್ಟಿಮಾಡಲಿಲ್ಲ. ಆದರೂ ಅವರ ವಚನಗಳು ಒಂದು ವಿಶಿಷ್ಟ ಪ್ರಕಾರವಾಗಿ ಕನ್ನಡ ಸಾಹಿತ್ಯಲೋಕದಲ್ಲಿ ನೆಲೆನಿಂತಿವೆ. ಶರಣರು ತಮ್ಮ ಚಿಂತನೆ, ಸಾಧನೆ, ಮತ್ತು ಅನುಭಾವಗಳ ಬೆಳಕಿನಲ್ಲಿ ಕಂಡರಿಸಿದ ತತ್ತ್ವಗಳನ್ನು, ಜೀವನಮೌಲ್ಯಗಳನ್ನು ಜನಸಾಮಾನ್ಯರೊಂದಿಗೆ ಹಂಚಿಕೊಳ್ಳಲೆಂದು, ಗಹನವೂ ಅಮೂರ್ತವೂ ಆದ ಅನುಭವಗಳನ್ನು ದಿನನಿತ್ಯದ ಸರಳವಾದ ಆಡುನುಡಿಯಲ್ಲಿ ಹೇಳಿದುದು, ನಂತರ ಬರೆದುದು, ವಚನಗಳಾದವು. ಪ್ರತಿಯೊಬ್ಬ ವಚನಕಾರನೂ ತನ್ನ ಇಷ್ಟದೈವದ ಹೆಸರನ್ನು ಅಂಕಿತ ಮಾಡಿಕೊಂಡು, ಅದರ ಸಮ್ಮುಖದಲ್ಲಿ ನಿವೇದಿಸಿಕೊಂಡಂತೆ, ಸಾಕ್ಷಿಯಲ್ಲಿ ತನಗೆ ತಾನು ಹೇಳಿಕೊಂಡಂತೆ, ತನಗೆ ಅನಿಸಿದಂತೆ ಅಭಿವ್ಯಕ್ತಿಸಿರುವುದು ಸರ್ವವಿದಿತ. ಈ ರೀತಿಯ ಬರಹ ಅಂದಿಗೆ ಹೊಸತು. ಇದಕ್ಕೆ ಮೂಲ ಸ್ಫೂರ್ತಿ ಆದ್ಯರ ಪೈಕಿ ಜೇಡರ ದಾಸಿಮಯ್ಯ; ಅನಂತರ ಮಾದರಿಯಾದವರು ಬಸವಣ್ಣನವರು.

ಮಧ್ಯಯುಗದಲ್ಲಿ ಈ ವಚನಸಂಪ್ರದಾಯ ಮತ್ತೆ ಕಾಣಿಸಿಕೊಂಡು ಮರೆಯಾಯಿತು. ನವೋದಯ ಕಾಲದ ನಂತರ ಕೆಲವರು ಈ ಮಾದರಿಯನ್ನು ಅನುಕರಿಸಿ, ಅನುಸರಿಸಿ ಆಧುನಿಕ ವಚನಗಳನ್ನು ರಚಿಸಿದರು. ಅವೂ ಈಗ ಪ್ರಚಲಿತವಾಗಿವೆ.

'ಜೀವಿ'ಯವರ ರಚನೆಗಳು ಇವೆಲ್ಲವುಗಳಿಗಿಂತಲೂ ಭಿನ್ನ. ಇವರ ರಚನೆಗಳಿಗೆ ತ್ರಿಪದಿಗಳು, ಕಗ್ಗದಂತಹ ಚೌಪದಿಗಳು, ಚುಟುಕಗಳು, ಹನಿಗವನಗಳು ಸ್ಫೂರ್ತಿಯೋ ಪ್ರಚೋದನೆಯೋ ಆಗಿರಬಹುದು. 'ಜೀವಿ' ಯಾವ ಅಂಕಿತವನ್ನೂ ಇಟ್ಟುಕೊಳ್ಳದೆ, ತಾವು ಹೇಳಬಯಸುವ ಸಾರ್ವಕಾಲಿಕ ವಿಚಾರಗಳನ್ನು, ಮೌಲ್ಯಗಳನ್ನು, ಸಂಗ್ರಹಿಸಿದ ಹಾಸ್ಯೋಕ್ತಿ–ಚತುರೋಕ್ತಿಗಳನ್ನು ತಮ್ಮದೇ ಆದ ರೀತಿಯಲ್ಲಿ ವ್ಯಕ್ತಮಾಡಿದ್ದಾರೆ, ಈ ರಚನೆಗಳು ಸಂಸ್ಕೃತ ಸುಭಾಷಿತಗಳನ್ನು ಮತ್ತು ಮಂಕುತಿಮ್ಮನ ಕಗ್ಗದಂತಹ ವಿವೇಕ ಚೌಪದಿಗಳನ್ನು ನೆನಪಿಗೆ ತರುತ್ತವೆ. ಈ ವಿಷಯವಾಗಿ, "ಗದ್ಯಕ್ಕೆ ಹೊರಳದ, ಪದ್ಯಕ್ಕೆ ಉರುಳದ ಶಿಲ್ಪವನ್ನು 'ಜೀವಿ'ಯವರು ಈ ಕೃತಿಯಲ್ಲಿ ಬಳಸಿಕೊಂಡಿದ್ದಾರೆ" ಎಂಬ ಡಾ. ಎಂ.ಎಂ. ಕಲಬುರ್ಗಿಯವರ ಹಿನ್ನುಡಿ ಸಮಂಜಸವಾಗಿದೆ.

ಇಷ್ಟು ರೂಪದ ಮಾತಾಯಿತು. ಇನ್ನು 'ವಸ್ತು'ವಾದರೋ 'ಜೀವಿ'ಯವರ ವಿಸ್ತಾರವಾದ ಅಧ್ಯಯನ ಮತ್ತು ಅನುಭವಗಳ ಭಂಡಾರದಿಂದ ಆಯ್ದಿರುವಂಥದು. ಎಲ್ಲೋ ಓದಿದ ಚತುರೋಕ್ತಿ, ಕೇಳಿದ ಹಾಸ್ಯ ಚಟಾಕಿ, ಮನಸೆಳೆದ ನೀತಿಮಾತು, ವಿವೇಕವಾಣಿ 'ಜೀವಿ'ಯವರ ರಚನೆಗೆ ಗ್ರಾಸವಾಗುತ್ತದೆ, ಸೊಗಸಾದ ಮಾತುಗಳ ಬಂಧದಲ್ಲಿ ಹೊಸಹುಟ್ಟು ಪಡೆಯುತ್ತದೆ. ಕವಿಯ ದೃಷ್ಟಿಕೋನದ ಛಾಪು ಅದರ ಮೇಲೆ ಬಿದ್ದು ಚಂದವಾಗುತ್ತದೆ. ಉದಾಹರಣೆಗೆ ಈ ವಚನವನ್ನು ನೋಡಿ:

**ಕಚ್ಚಿದರೆಂದು ಕೋಪಿಸಿ ಕಬ್ಬು ಕಹಿಯಾಗುವುದೇ ?**
**ಮುತ್ತನಿತ್ತರೆಂದು ಮೆಚ್ಚಿ ಬೇವು ಸಿಹಿಯಾಗುವುದೇ?**

(ಪುಟ ೧೦ ವಚನ ೧)

ಈ ವಚನ ಇಷ್ಟೇ ಇದ್ದಿದ್ದರೆ ಸಾಕಾಗಿತ್ತು. ಸಪ್ಪೆಯೆನಿಸುವ ಕಡೆಯ ಮೂರು ಸಾಲುಗಳು ಬೇಕೇ ಆಗಿರಲಿಲ್ಲ.

**'ಕತ್ತಲೆ ಎಷ್ಟೇ ಘನವಾಗಿರಲಿ, ತೊಲಗಿಸಲು ಒಂದು ಹಣತೆ ಬೇಕು'** ಎಂಬ 'ಜೀವಿ' ಅವರ ವಚನ, ಬಸವಣ್ಣನವರ **'ತಮಂಧ ಘನ ಜ್ಯೋತಿ ಕಿರಿದೆನ್ನಬಹುದೇ?'** ಎಂಬ ವಚನವನ್ನು ನೆನಪು ತರುತ್ತದೆ. ಆದರೆ, ಒಂದು ಮಾತಂತೂ ಸತ್ಯ: ಬಸವಣ್ಣನ ವಚನದಲ್ಲಿರುವ ಧ್ವನಿ, ಮಾತಿನ ಶಕ್ತಿ ಮೇಲಿನ ಸಾಲಿನಲ್ಲಿ ಕಾಣದು.

'ವಚನ ಶತಕ' ನೂರೇ ವಚನ ಆಗಿಲ್ಲ – ನೂರು ಶೀರ್ಷಿಕೆಗಳಾಗಿವೆ. ಒಂದೊಂದು ಶೀರ್ಷಿಕೆಯಲ್ಲೂ ನಾಲ್ಕು–ನಾಲ್ಕು ವಚನಗಳಿವೆ. 'ಸಾಹಿತ್ಯ' ಎಂಬ ಶೀರ್ಷಿಕೆಯಡಿ ಏಳು ತ್ರಿಪದಿಗಳು ಇವೆ. ನೂರು ಶೀರ್ಷಿಕೆಗಳಲ್ಲಿ ವಸ್ತುವನ್ನು ವಿಂಗಡಿಸಿರುವುದು ಒಳ್ಳೆಯ ಅಂಶ, ವೈವಿಧ್ಯ ಸೂಚಕ.

ಈ ವಚನಗಳಲ್ಲಿ ಉದ್ದಕ್ಕೂ ಓದಿಸಿಕೊಂಡು ಹೋಗುವ ಸ್ವಾರಸ್ಯವಿದೆ. ಯಾವ ಹೆಸರಿನಲ್ಲೇ ಕರೆದರೂ, ಕರೆಯದಿದ್ದರೂ, 'ಜೀವಿ'ಯವರ ಈ ರಚನೆಗಳು ರೂಪದಲ್ಲೂ, ವಸ್ತುವಿನಲ್ಲೂ ತಮ್ಮದೇ ಆದ ಸೊಗಸನ್ನು ಸೂಸುತ್ತವೆ. ಈಚೆಗೆ ಬಹು ಜನಪ್ರಿಯವಾಗುತ್ತಿರುವ 'ಚುಟುಕ', 'ಹನಿಗವನ' ಕೊಡುವ ಬೌದ್ಧಿಕ ಸುಖವನ್ನೇ, ಸವಿರುಚಿಯನ್ನೇ 'ಜೀವಿ'ಯವರ ಈ ಕೃತಿ ನೀಡುತ್ತದೆ. ಇದು ಒಟ್ಟಿನಲ್ಲಿ ಹೇಳುವ ಮಾತು. ಹತ್ತು ಬರೆದಾಗ ಹತ್ತೂ ಶ್ರೇಷ್ಠ ಮಟ್ಟದಲ್ಲಿರಬೇಕೆಂದಿಲ್ಲ. ಇಲ್ಲಿಯೂ ಕೆಲವು ವಾಚ್ಯವಾಗಿ, ಸಪ್ಪೆಯಾಗಿ ಇದ್ದರೂ ಹಲವು ಒಳ್ಳೆ ಗುಣಮಟ್ಟದ, ನೆನಪಿನಲ್ಲಿ ಉಳಿಯುವ ವಚನಗಳಿವೆ. ಅದಕ್ಕಾಗಿ 'ಜೀವಿ'ಯವರಿಗೆ ಅಭಿನಂದನೆ ಸಲ್ಲುತ್ತದೆ.

**– ಪ್ರೊ. ಕೆ. ಬಿ. ಪ್ರಭುಪ್ರಸಾದ್, ಮೈಸೂರು**



# ನೇತಾಜಿ ಸುಭಾಷರ ಪ್ರೇರಣಾಪುರುಷ : ಸ್ವಾಮಿ ವಿವೇಕಾನಂದ

**ಡಾ. ಜೆ.ಎಸ್. ಕುಸುಮಗೀತ**

ಭಾರತ ಸ್ವಾತಂತ್ರ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿದ್ದ ಮಹಾನ್ ವ್ಯಕ್ತಿಗಳಲ್ಲಿ ಸುಭಾಷ್‌ಚಂದ್ರ ಬೋಸರು ಕೂಡ ಒಬ್ಬರು. ಇವರ ಮೇರುವ್ಯಕ್ತಿತ್ವ, ಸಾಹಸಶೀಲತೆ, ತ್ಯಾಗ ಹಾಗೂ ಸಮರ್ಪಣಾಭಾವಗಳು ರೂಪುಗೊಂಡದ್ದು ಸ್ವಾಮಿ ವಿವೇಕಾನಂದರಿಂದಲೇ. ಈ ಅಂಶವನ್ನು ಓಜಸ್ವಿಯಾಗಿ ಪರಿಚಯಿಸಿರುವ ಲೇಖಕರು ಮೈಸೂರು ವಿಶ್ವವಿದ್ಯಾನಿಲಯದ ಹಿಂದಿ ವಿಭಾಗದ ಮುಖ್ಯಸ್ಥರಾಗಿದ್ದರು. ಅಧ್ಯಯನ, ಅಧ್ಯಾಪನ, ಸಾಹಿತ್ಯ ರಚನೆ ಮತ್ತು ಅನುವಾದ ಕ್ಷೇತ್ರಗಳಲ್ಲಿ ಅಪಾರ ಅನುಭವವನ್ನು ಹೊಂದಿರುವ ಇವರು ಕನ್ನಡ ಮತ್ತು ಹಿಂದಿಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

**ಭಾ**ರತದ ಸ್ವಾತಂತ್ರ್ಯ ಹೋರಾಟದ ಮಹಾಯಜ್ಞದಲ್ಲಿ ಅನೇಕರು ತಮ್ಮ ಹವಿಸ್ಸನ್ನು ಸಮರ್ಪಿಸಿದ್ದಾರೆ. ಹೀಗೆ ತಮ್ಮ ತನುಮನಧನಗಳನ್ನು ಅರ್ಪಿಸಿದ ಮಹಾಪುರುಷರಲ್ಲಿ ಸುಭಾಷ್ ಚಂದ್ರ ಬೋಸ್ ಸ್ಮರಣೀಯರು. ಇಂದಿಗೂ ರಾಷ್ಟ್ರದ ಹಿತಕ್ಕಾಗಿ, ಪ್ರಗತಿಗಾಗಿ ನಿಃಸ್ವಾರ್ಥಭಾವನೆಯಿಂದ ತಮ್ಮ ಸರ್ವಸ್ವವನ್ನೂ ಸಮರ್ಪಣೆ ಮಾಡುವಂತಹ ಯುವಕರ ಆವಶ್ಯಕತೆ ಇದೆ. ಅಂಥವರಿಗೆಲ್ಲ ನೇತಾಜಿ ಸ್ಫೂರ್ತಿಯನ್ನು ನೀಡುತ್ತಾರೆ.

ನೇತಾಜಿ ಸುಭಾಷ್‌ಚಂದ್ರ ಬೋಸರಿಗೆ, ತಮ್ಮ ಇಡೀ ಜೀವನವನ್ನು **'ಬಹುಜನ ಹಿತಾಯ, ಬಹುಜನ ಸುಖಾಯ'**ದ ಶ್ರೇಷ್ಠಧ್ಯೇಯಕ್ಕೆ ಮುಡುಪಾಗಿಡುವಂತಹ ಪ್ರೇರಣೆ ದೊರಕಿದ್ದು ಸ್ವಾಮಿ ವಿವೇಕಾನಂದರಿಂದ. ತಮ್ಮ ಜೀವನದಲ್ಲಿ ಸ್ವಾಮೀಜಿ ಅವರ ಪ್ರವೇಶ ಹಾಗೂ ಪ್ರಭಾವದ ಬಗ್ಗೆ ತಿಳಿಸುತ್ತ ನೇತಾಜಿ ತಮ್ಮ ಆತ್ಮಕಥೆಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನ ಜೀವನದಲ್ಲಿ ವಿವೇಕಾನಂದರ ಪ್ರವೇಶವಾದಾಗ ನಾನು ಹೆಚ್ಚೆಂದರೆ ಹದಿನೈದು ವರ್ಷದವನಾಗಿದ್ದಿರಬಹುದು. ಸ್ವಾಮೀಜಿ ಅವರನ್ನು ಅರ್ಥಮಾಡಿಕೊಳ್ಳಲು ನನಗೆ ಸಾಕಷ್ಟು ಸಮಯ ಹಿಡಿಯಿತಾದರೂ ನನ್ನಲ್ಲಿ ಒಂದು ಕ್ರಾಂತಿ ಉಂಟಾಯಿತು. ಆಗ ನನ್ನ ಮೇಲಾದ ಪರಿಣಾಮ ಎಂದೆಂದಿಗೂ ಗಟ್ಟಿಯಾಗಿ ಉಳಿಯಿತು. ನನ್ನಲ್ಲಿ ಏಳುತ್ತಿದ್ದ ಎಷ್ಟೋ ಪ್ರಶ್ನೆಗಳಿಗೆ ವಿವೇಕಾನಂದರ ಕೃತಿಗಳಲ್ಲಿ ಸಮಾಧಾನಕರ ಉತ್ತರ ದೊರಕಿತು. ನಾನು ವಿವೇಕಾನಂದರು ತೋರಿಸಿದ ಮಾರ್ಗದ ಬಗ್ಗೆ ಆಲೋಚಿಸತೊಡಗಿದೆ. ವಿವೇಕಾನಂದರ ಮೂಲಕ ನನಗೆ ರಾಮಕೃಷ್ಣ ಪರಮಹಂಸರ ಮೇಲೆ ಒಲವು ಉಂಟಾಯಿತು. ಶಾಲೆಯ ಕೆಲವು ಸ್ನೇಹಿತರನ್ನು ಸೇರಿಸಿಕೊಂಡು 'ಮಿತ್ರಮಂಡಲಿ'ಯನ್ನು ಪ್ರಾರಂಭಿಸಿದೆ. ನಾವು ಈ ಮಂಡಲಿಯಲ್ಲಿ ಶ್ರೀರಾಮಕೃಷ್ಣ ಹಾಗೂ ವಿವೇಕಾನಂದರ ಉಪದೇಶಗಳ ಬಗ್ಗೆ ಚರ್ಚಿಸುತ್ತಿದ್ದೆವು" (ನೇತಾಜಿ ಸಂಪೂರ್ಣ ವಾಙ್ಮಯ, ಖಂಡ – ೧, ಪುಟ ೩೩).

ಹೀಗೆ ಶಾಲೆಯಲ್ಲಿ ಓದುತ್ತಿದ್ದಾಗಲೇ ಸುಭಾಷರ ಜೀವನದಲ್ಲಿ ಸ್ವಾಮಿ ವಿವೇಕಾನಂದರ ಪ್ರವೇಶವಾಗಿತ್ತು ಎನ್ನಬಹುದು. ಅವತ್ತಿನಿಂದ ಅವರ ಜೀವನವಿಧಾನವೇ ಬದಲಾಯಿತು. ಅವರು ಧ್ಯಾನ, ಯೋಗ, ಬ್ರಹ್ಮಚರ್ಯ ಮುಂತಾದ ವಿಷಯಗಳ ಬಗ್ಗೆ ಆಳವಾದ ಅಧ್ಯಯನ ಹಾಗೂ ಸಾಧನೆಗಳನ್ನು ಆರಂಭಿಸಿದರು. ಮಾರ್ಗದರ್ಶನಕ್ಕಾಗಿ ಒಬ್ಬ ಗುರುವು ಅವಶ್ಯಕ ಎಂದು ಅವರಿಗೆ ಅನ್ನಿಸಿತು. ಎಷ್ಟೋ ಸಾಧು–ಸಂನ್ಯಾಸಿಗಳನ್ನು ಸಂಪರ್ಕಿಸಿದರಾದರೂ, ಅವರಿಗೆ ಸಮಾಧಾನವಾಗಲಿಲ್ಲ. ಮೊದಲು ಚಿತ್ತಶುದ್ಧಿ ಆಗಬೇಕು ಎನ್ನಿಸಿತು. ಇದಕ್ಕಾಗಿ ಸೇವಾಕಾರ್ಯಗಳಲ್ಲಿ ತಮ್ಮನ್ನು ತಾವು ಅವರು ತೊಡಗಿಸಿಕೊಂಡರು. ಕ್ರಮೇಣ ಆಧ್ಯಾತ್ಮಿಕ ವಿಕಾಸಕ್ಕಾಗಿ ಸಮಾಜಸೇವೆ ಅಗತ್ಯ ಎಂದು ಅವರಿಗೆ ಅನ್ನಿಸತೊಡಗಿತು. ವಿವೇಕಾನಂದರ ಕೃತಿಗಳನ್ನು ಓದಿದ್ದರಿಂದಲೇ ಈ ಭಾವನೆ ಅವರಿಗೆ ಬಂದಿತ್ತೇನೋ. ಏಕೆಂದರೆ ವಿವೇಕಾನಂದರು ಜನಸೇವೆ ಹಾಗೂ ದೇಶಸೇವೆಗಳ ಉಪದೇಶವನ್ನು ನೀಡಿದ್ದರು. ಬಡವರ ಸೇವೆಯೇ ಭಗವಂತನ ಸೇವೆ ಎಂದು ಘೋಷಿಸಿದ್ದರು. ಸುಭಾಷರ ಮಾತುಗಳಲ್ಲಿಯೇ ಹೇಳುವುದಾದರೆ, "ನನ್ನ ಮನಸ್ಸನ್ನು ಅಂಧವಿಶ್ವಾಸದಿಂದ ಮುಕ್ತಗೊಳಿಸುವ ಪ್ರಯಾಸದಲ್ಲಿ ವಿವೇಕಾನಂದರಿಂದ ನನಗೆ ಬಹಳ ಸಹಾಯವಾಯಿತು... ಧರ್ಮ ಮತ್ತು ವಿಜ್ಞಾನಗಳ ಸಮನ್ವಯವೇ ಅವರ ಜೀವನದ ಒಂದು ಪ್ರಮುಖ ಕಾರ್ಯವಾಗಿತ್ತು" (ನೇತಾಜಿ ಸಂಪೂರ್ಣ ವಾಙ್ಮಯ, ಖಂಡ – ೧, ಪುಟ ೪೦).

ಧರ್ಮ ಮತ್ತು ಸೇವೆಗಳಲ್ಲಿ ಆಸಕ್ತಿ ಇದ್ದಾಗ್ಯೂ ಸುಭಾಷರು ತಮ್ಮ ವಿದ್ಯಾಭ್ಯಾಸವನ್ನು ನಿರ್ಲಕ್ಷಿಸಲಿಲ್ಲ. ೧೯೧೩ರ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಸುಭಾಷರು ಎರಡನೆಯ ರ‍್ಯಾಂಕ್ ಗಳಿಸಿದರು. ಸುಭಾಷರ ಉಚ್ಚಶಿಕ್ಷಣವು ಕೊಲ್ಕತಾದಲ್ಲಿ ಆಯಿತು. ರಾಮಕೃಷ್ಣ – ವಿವೇಕಾನಂದರ ಆದರ್ಶವುಳ್ಳ ವಿದ್ಯಾರ್ಥಿಗಳ ಗುಂಪಿನಲ್ಲಿ ಸುಭಾಷರೂ ಸೇರಿಕೊಂಡರು. ಆ ದಿನಗಳಲ್ಲಿ ಕೊಲ್ಕತಾದಲ್ಲಷ್ಟೇ ಅಲ್ಲ, ಅಖಿಲಭಾರತೀಯ ರಾಜಕಾರಣದಲ್ಲಿ

ಶ್ರೀ ಅರವಿಂದರು ಮತ್ತು ಸುರೇಂದ್ರನಾಥ ಬ್ಯಾನರ್ಜಿ ಹೆಸರುವಾಸಿಯಾಗಿದ್ದರು. ಆದರೆ ಸುಭಾಷರ ಆಸಕ್ತಿ ಆಗ ಧರ್ಮ ಹಾಗೂ ಸಮಾಜಸೇವೆಗಳಿಗಷ್ಟೇ ಸೀಮಿತವಾಗಿತ್ತು.

ಆ ವರ್ಷದ ಓದು ಮುಗಿದ ನಂತರ, ೧೯೧೪ರ ಬೇಸಿಗೆಯ ರಜದಲ್ಲಿ ಸುಭಾಷರು ತಮ್ಮ ಮಿತ್ರ ಹೇಮಂತಕುಮಾರ್ ಸರ್ಕಾರ್ ಜೊತೆಗೆ ಹಲವಾರು ಸ್ಥಳಗಳಿಗೆ ತೀರ್ಥಯಾತ್ರೆ ಹೋದರು. ಪ್ರಯಾಣ ಮಾಡುತ್ತ ದಾರಿಯಲ್ಲಿ, "ಮನೆಗೆ ನಾನು ಮರಳಿ ಬರುವುದಿಲ್ಲ" ಎಂದು ಕುಟುಂಬದವರಿಗೆ ಬರೆದು ತಿಳಿಸಿದ್ದರು. ಯಾತ್ರೆಯ ಸಂದರ್ಭದಲ್ಲಿ ವಾರಾಣಸಿಯಲ್ಲಿ ತಂಗಿದ್ದ, ರಾಮಕೃಷ್ಣ ಮಹಾಸಂಘದ ಅಂದಿನ ಅಧ್ಯಕ್ಷರಾಗಿದ್ದ ಸ್ವಾಮಿ ಬ್ರಹ್ಮಾನಂದಜಿಯವರನ್ನು ಭೇಟಿಯಾದರು. ಬ್ರಹ್ಮಾನಂದಜಿ ಅವರು ಸುಭಾಷರನ್ನು ಪ್ರೀತಿಯಿಂದ ತಬ್ಬಿಕೊಂಡು, "ನಿನಗೆ ಅದ್ಭುತ ಭವಿಷ್ಯ ಕಾದಿದೆ" ಎಂದು ಹೇಳಿ ಸೂಕ್ತ ಮಾರ್ಗದರ್ಶನ ಮಾಡಿದರು. ಸಂನ್ಯಾಸ ಸ್ವೀಕರಿಸುವ ತಮ್ಮ ತೀವ್ರ ಇಚ್ಛೆಯನ್ನು ಅದುಮಿಟ್ಟುಕೊಂಡು, ನಿರಾಶೆಯಿಂದ ಸುಭಾಷರು ಮನೆಗೆ ಹಿಂತಿರುಗಿದರು. ಮನೆಗೆ ಬರುತ್ತಲೇ ಅವರಿಗೆ ಟೈಫಾಯ್ಡ್ ಜ್ವರ ಬಂದು ಬಹಳ ನಿಶ್ಶಕ್ತಿಯುಂಟಾಯಿತು. ಸುಮಾರು ಒಂದು ವರ್ಷ ಕಳೆದರೂ ಅವರ ಆರೋಗ್ಯ ಸುಧಾರಿಸಲೇ ಇಲ್ಲ. ವಿವೇಕಾನಂದರು "ಕಬ್ಬಿಣದಂತೆ ಸುದೃಢ ನರನಾಡಿಗಳು ಮತ್ತು ಶ್ರೇಷ್ಠ ಪ್ರಭಾವಶಾಲಿ ಮಿದುಳು ನಿನ್ನಲ್ಲಿದ್ದರೆ ಇಡೀ ವಿಶ್ವವೇ ನಿನ್ನ ಚರಣಗಳಲ್ಲಿ ತಲೆಬಾಗುವುದು" ಎಂದು ಹೇಳಿದ್ದಾರೆ. ಆ ಮಾತಿನ ಸತ್ಯದ ಅರಿವು ಸುಭಾಷರಿಗೆ ಆಗ ಉಂಟಾಯಿತು.

ಸುಭಾಷರ ಮನಸ್ಸಿನಲ್ಲಿ ಈಗಲೂ ದ್ವಂದ್ವ ನಡೆದೇ ಇತ್ತು. ತಮ್ಮ ಜೀವನದ ದಿಕ್ಕನ್ನು ಅವರಿಗೆ ಇನ್ನೂ ಗುರುತಿಸಿಕೊಳ್ಳಲಾಗಿರಲಿಲ್ಲ. ಅದೇ ವರ್ಷ, ಅಂದರೆ ೧೯೧೫ನೇ ಇಸವಿಯ ಡಿಸೆಂಬರ್ ೮ರಂದು ಅವರು ಪ್ರಸಿದ್ಧ ವಿಜ್ಞಾನಿಯಾದ ಆಚಾರ್ಯ ಜಗದೀಶಚಂದ್ರ ಬೋಸರ ಭಾಷಣವನ್ನು ಕೇಳಿದರು. ಆಗ ಅವರಿಗೆ ನೆನಪಾದದ್ದು ಸ್ವಾಮಿ ವಿವೇಕಾನಂದರೇ. ಅವರು ತಮ್ಮ ಒಂದು ಪತ್ರದಲ್ಲಿ ಹೀಗೆ ಹೇಳಿಕೊಂಡಿದ್ದಾರೆ: "ಏಕೋ ಏನೋ, ನನಗೆ ಬಾಲ್ಯದಿಂದಲೂ ವಿವೇಕಾನಂದ ಹಾಗೂ ಜಗದೀಶಚಂದ್ರರ ಬಗ್ಗೆ ಅಪಾರ ಶ್ರದ್ಧೆ ಇತ್ತು" (ಪತ್ರಾವಲಿ, ಪು.೫೨).

ಮುಂದೆ, ೧೯೧೯ರಲ್ಲಿ ತಮ್ಮ ತಂದೆಯ ಇಚ್ಛೆಯಂತೆ ಐ.ಸಿ.ಎಸ್. ಪರೀಕ್ಷೆಗಾಗಿ ಓದಲು ಸುಭಾಷರು ಇಂಗ್ಲೆಂಡಿಗೆ ಹೋದರು. ಅದರಲ್ಲಿ ನಾಲ್ಕನೆಯ ರ‍್ಯಾಂಕ್ ಪಡೆದರೂ ಕೂಡ, ಸರ್ಕಾರಿ ನೌಕರಿ ಮಾಡಲು ತಯಾರಾಗಿರಲಿಲ್ಲ. ೧೯೨೧ರಲ್ಲಿ ನೌಕರಿಯ ಆಮಿಷವನ್ನು ತಿರಸ್ಕರಿಸಿ ತಾಯ್ನಾಡಿಗೆ ಮರಳಿಬಂದರು. ಪ್ರಸಿದ್ಧ ನೇತಾರರಾಗಿದ್ದ ದೇಶಬಂಧು ಚಿತ್ತರಂಜನ ದಾಸರೊಂದಿಗೆ ಈ ಮೊದಲೇ ಪತ್ರವ್ಯವಹಾರವನ್ನೂ ಅವರು ಮಾಡಿದ್ದರು. ಭಾರತಕ್ಕೆ ವಾಪಸ್ಸು ಬಂದು ಮಹಾತ್ಮ ಗಾಂಧಿಯವರನ್ನು ಭೇಟಿಮಾಡಿದರು. ಶ್ರೀ ಚಿತ್ತರಂಜನ ದಾಸರು ಸ್ಥಾಪನೆ ಮಾಡಿದ್ದ ವಿದ್ಯಾಲಯವೊಂದರಲ್ಲಿ ಶಿಕ್ಷಕರಾಗಿ ಕೆಲಸ ಮಾಡಲು ಆರಂಭಿಸಿದರು. ಇದರ ಜೊತೆಗೆ ಪತ್ರಕರ್ತರಾಗಿಯೂ ದುಡಿದರು. ಅಲ್ಲದೆ, ಯುವ ಸ್ವಯಂಸೇವಕ ದಳದ ಸಂಘಟನೆಯಲ್ಲಿ ಕೂಡ ತಮ್ಮನ್ನು ತಾವು ತೊಡಗಿಸಿಕೊಂಡರು.

ಇದೇ ಸಮಯಕ್ಕೆ ಭಾರತಕ್ಕೆ ಪ್ರಿನ್ಸ್ ಆಫ್ ವೇಲ್ಸ್‌ನ ಆಗಮನವನ್ನು ವಿರೋಧಿಸಿ ಸುಭಾಷರು ಪ್ರದರ್ಶನವನ್ನು ನಡೆಸಿದರು. ದೇಶಬಂಧು ಚಿತ್ತರಂಜನ ದಾಸ್ ಮತ್ತು ಸುಭಾಷರಿಬ್ಬರನ್ನೂ ಸರ್ಕಾರ ಸೆರೆಹಿಡಿಯಿತು. ಸುಭಾಷರಿಗೆ ಆರು ತಿಂಗಳ ಸಜಾ ಆಯಿತು. ಇದು ಸುಭಾಷ್‌ಚಂದ್ರ ಬೋಸರ ಜೀವನದಲ್ಲಿಯೇ ಮೊಟ್ಟಮೊದಲ ಜೈಲುವಾಸ. ೧೯೨೪ರಲ್ಲಿ ಚಿತ್ತರಂಜನ ದಾಸ್ ಕೊಲ್ಕತಾ ಮಹಾನಗರದ ಮೇಯರ್ ಆಗಿ ಆಯ್ಕೆಯಾದರು. ಹಾಗೆಯೇ ಸುಭಾಷ್‌ಚಂದ್ರರು ಅದರ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನೇಮಕಗೊಂಡರು. ಇವರಿಬ್ಬರೂ ತಮ್ಮ ಕಾರ್ಯದಕ್ಷತೆಗಾಗಿ ಅಪಾರ ಜನಪ್ರಿಯತೆಯನ್ನು ಪಡೆದುಕೊಂಡರು. ಬ್ರಿಟಿಷ್ ಸರ್ಕಾರ ಇದನ್ನು ಸಹಿಸಲಿಲ್ಲ. ಬೆಂಗಾಲ್ ಆರ್ಡಿನೆನ್ಸ್ ಆಕ್ಟ್ ಎಂಬ ಶಾಸನದ ಅಡಿಯಲ್ಲಿ, ಯಾವುದೇ ಆರೋಪವಿಲ್ಲದೆಯೇ, ಸರ್ಕಾರ ಸುಭಾಷರನ್ನು ಸೆರೆಹಿಡಿಯಿತು. ಕೆಲವು ದಿನಗಳ ಕಾಲ ಅವರನ್ನು ಬರ್‌ಹಾಮ್‌ಪುರ ಜೈಲಿನಲ್ಲಿ ಇಟ್ಟು, ಅನಂತರ ಬರ್ಮಾದ ಮಾಂಡಲೆ ಸೆರೆವಾಸಕ್ಕೆ ವರ್ಗಾಯಿಸಿತು. ಅಲ್ಲಿ ಅವರ ಆರೋಗ್ಯ ಕೆಡಲಾರಂಭಿಸಿತು. ಆಗ ಅವರನ್ನು ಬಿಡುಗಡೆ ಮಾಡಲಾಯಿತು. ಆರೋಗ್ಯ ಸರಿ ಇಲ್ಲದಿದ್ದರೂ, ಸುಭಾಷರು ಮತ್ತೆ ರಾಜಕೀಯ ಜೀವನದಲ್ಲಿ ಸಕ್ರಿಯರಾದರು. ಯುವಕರ ಸಂಘಟನೆ ಮತ್ತು ಟ್ರೇಡ್ ಯೂನಿಯನ್ ಆಂದೋಲನದ ಅಭಿವೃದ್ಧಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ತಮ್ಮ ಮೇಲೆ ಸ್ವಾಮಿ ವಿವೇಕಾನಂದರು ಬೀರಿದ ಪ್ರಭಾವದ ಬಗ್ಗೆ ಸುಭಾಷ್‌ಚಂದ್ರ ಬೋಸರು ತಾವು ಮಾಡಿದ ಭಾಷಣಗಳಲ್ಲಿ ಆಗಿಂದಾಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು:

೧೯೨೯ರ ಮಾರ್ಚ್ ೩೦ರಂದು, ರಂಗಪುರದಲ್ಲಿ ವಂಗೀಯ ಪ್ರಾದೇಶಿಕ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಸುಭಾಷರು ಹೇಳಿದ ಮಾತುಗಳಿವು: "ನಮ್ಮ ದೇಶದಲ್ಲಿ ನವರಾಷ್ಟ್ರ ನಿರ್ಮಾಣದ ಕಾರ್ಯವನ್ನು ಆರಂಭಿಸಿದ್ದು ಸ್ವಾಮಿ ವಿವೇಕಾನಂದರೇ... ನಿಜವಾದ ಅರ್ಥದಲ್ಲಿ ಮಾನವ ನಿರ್ಮಾಣ ಆಗದ ಹೊರತು ಸ್ವತಂತ್ರ ಹಾಗೂ ಬಲಿಷ್ಠ ರಾಷ್ಟ್ರದ ನಿರ್ಮಾಣ ಆಗಲಾರದು. ಆದುದರಿಂದಲೇ 'ಮಾನವ ನಿರ್ಮಾಣವೇ ನನ್ನ ಜೀವನಧ್ಯೇಯ' ಎಂದು ಅವರು ಹೇಳಿದ್ದಾರೆ. ನಿಜವಾದ ಮಾನವ ನಿರ್ಮಾಣಕ್ಕಾಗಿ ಅವರು ಯಾವುದೇ ಒಂದು ವಿಶೇಷ ವರ್ಗದತ್ತ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಲಿಲ್ಲ. ಅದಕ್ಕೆ ಬದಲಾಗಿ ಸಮಗ್ರ ಸಮಾಜದ ಕಡೆಗೆ ಗಮನ ನೀಡಿದರು... ಇದೇ ನಿಜವಾದ ಸಮಾಜವಾದ. ಭಾರತದಲ್ಲಿ ಈ ಸಮಾಜವಾದದ ಹುಟ್ಟು ಕಾರ್ಲ್ ಮಾರ್ಕ್ಸ್‌ನ ಕಗ್ಗದಿಂದ ಆಗಿಲ್ಲ, ಬದಲಾಗಿ ಶೈಕ್ಷಣಿಕ ಆಂದೋಲನ ಮತ್ತು ಆಧ್ಯಾತ್ಮಿಕ ಅನುಭೂತಿಯಿಂದ ಆಗಿದೆ" (ಸುಭಾಷ್ ರಚನಾವಲಿ, ಭಾಗ – ೧, ಪುಟ ೮೯).

೧೯೩೧ರ ಜನವರಿ ೧೦ರಂದು ಸ್ವಾಮಿ ವಿವೇಕಾನಂದರ